**ಓ.ಎಸ್. – 138/2018**

**ಪಿ.ಡಬ್ಲೂ – 1**

**ಸಾಕ್ಷಿಯನ್ನು ದಿಃ 06.09.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಟಿ.ಬಿ.ಎಂ. ವಕೀಲರಿಂದ**

1. ಈಗ ನಾನು ನೋಡುತ್ತಿರುವ ಛಾಯಾಚಿತ್ರದಲ್ಲಿ ನಮ್ಮ ಮನೆ ಕಾಣುವುದಿಲ್ಲ. ಈಗ ನಾನು ನೋಡುತ್ತಿರುವ ಛಾಯಾಚಿತ್ರದಲ್ಲಿ ನಾನು ಮತ್ತು ನನ್ನ ಚಿಕ್ಕಪ್ಪ ಕಾಣುತ್ತಿದ್ದೇವೆ ಎಂದರೆ ಸರಿ. ಸಾಕ್ಷಿಯು ಛಾಯಾಚಿತ್ರದಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ 14 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಛಾಯಾಚಿತ್ರದಲ್ಲಿರುವ ಮನೆ ನಮ್ಮ ಮನೆ ಎಂದು ಗುರುತಿಸಲು ಆಗುವುದಿಲ್ಲ, ಒಂದು ಕಡೆ ಮಾತ್ರ ಇರುವುದರಿಂದ ಯಾವ ಮನೆ ಎಂದು ಗುರುತಿಸಲು ಆಗುವುದಿಲ್ಲ. ಈಗ ನಾನು ನೋಡುತ್ತಿರುವ ಛಾಯಾಚಿತ್ರದಲ್ಲಿ ನಮ್ಮ ಚಿಕ್ಕಪ್ಪ ಇರುವುದಿಲ್ಲ, ಜೆ.ಸಿ.ಬಿ. ಮಾತ್ರ ಇರುತ್ತದೆ. ಸರ್ವೇ ಸಂಖ್ಯೆ 10 ರಲ್ಲಿ ನಾನು ಮತ್ತು ನನ್ನ ಚಿಕ್ಕಪ್ಪ ಕೆಲಸ ಮಾಡುತ್ತಿರುವುದಕ್ಕೆ ಸಂಬಂಧಿಸಿದ ಛಾಯಾಚಿತ್ರಗಳು ಇವು ಆಗಿರುತ್ತವೆ ಎಂದರೆ ಸರಿ. ಸಾಕ್ಷಿಯು 2 ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಡಿ 15 ಮತ್ತು 16 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಛಾಯಾಚಿತ್ರ ನನ್ನ ಮನೆ ಮತ್ತು ಅಂಗಳದ ಜಾಗ ಎಂದರೆ ಸರಿಯಲ್ಲ.

2. ನಿಪಿ 3 ನಕ್ಷೆಯನ್ನು ನಾವೇ ತಯಾರಿಸಿ ಪಂಚಾಯಿತಿಗೆ ಕಳುಹಿಸಲಾಗಿರುತ್ತದೆ ಎಂದರೆ ಸರಿ. ತಹಶೀಲ್ದಾರ್ ರವರು ಯಾವುದೇ ಆದೇಶವನ್ನು ಮಾಡಿಲ್ಲ ಮತ್ತು ಸರ್ವೇ ಕಾರ್ಯವನ್ನು ಸ್ಥಳದಲ್ಲಿ ನಡೆಸಿಲ್ಲ ಎಂದರೆ ಸರಿಯಲ್ಲ. ನಾನು ಪಂಚಾಯಿತಿಯ ಮೂಲಕ ಕಳುಹಿಸಿದ ನಕ್ಷೆ ಮತ್ತು ಅರ್ಜಿಯ ದೃಢೀಕೃತ ಪ್ರತಿಗಳನ್ನು ತಹಶೀಲ್ದಾರ್ ಕಚೇರಿಯಿಂದ ಪಡೆದು ನಾವು ತಯಾರಿಸಿದ ನಕ್ಷೆಯನ್ನು ತಹಶೀಲ್ದಾರ್ ರವರು ಅನುಮೋದಿಸಿದ ನಕ್ಷೆ ಎಂದು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

3. ನಾನು ಮತ್ತು ನನ್ನ ಸಹೋದರರನ್ನು ಹೊರತುಪಡಿಸಿ ಬೇರೆ ಯಾರೂ ಸಹ ಈ ದಾವೆಗೆ ವಾದಿಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ಸಂಖ್ಯೆ 10 ರಲ್ಲಿರುವ ನಮ್ಮ ಮನೆ ನನಗೆ ಕಾನೂನುಬದ್ಧವಾಗಿ ಮಂಜೂರಾಗಿರುವ ಮನೆ ಅಲ್ಲ ಎಂದರೆ ಸರಿಯಲ್ಲ. ಹಕ್ಕು ಪತ್ರವನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತೇನೆ.

ಸರ್ವೇ ಸಂಖ್ಯೆ 10 ರಲ್ಲಿ 60 ಎಕರೆ ಜಾಗವನ್ನು ಅಕ್ರಮವಾಗಿ ಒತ್ತುವರಿ ಮಾಡಲು ಜೆ.ಸಿ.ಬಿ. ಯಿಂದ ಕೆಲಸ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಜೆ.ಸಿ.ಬಿ. ಯು ನಮ್ಮ ಗ್ರಾಮ ನಮ್ಮ ಯೋಜನೆ ಎಂಬ ಯೋಜನೆಯಡಿಯಲ್ಲಿ ನೀರಿನ ಸರಬರಾಜಿಗೆ ಸಂಬಂಧಿಸಿದಂತೆ ನೀರಿನ ಪೈಪುಗಳ ಅಳವಡಿಕೆಯ ಕೆಲಸಕ್ಕಾಗಿ ಸ್ಥಳಕ್ಕೆ ಬಂದಿತ್ತು ಎಂದು ನುಡಿಯುತ್ತಾರೆ.

4. 1992 ರಲ್ಲಿ ನಾನು ಸರ್ವೇ ಸಂಖ್ಯೆ 10 ರ ಜಾಗವನ್ನು ಒತ್ತುವರಿ ಮಾಡುತ್ತಿದ್ದೇನೆಂದು ಈ ಪ್ರತಿವಾದಿ ಸೇರಿದಂತೆ ತುಮರಿಕೊಪ್ಪ ದ ಗ್ರಾಮಸ್ಥರು ಅರ್ಜಿಯನ್ನು ತಹಶೀಲ್ದಾರ್ ರವರಿಗೆ ಮತ್ತು ಉಪವಿಭಾಗಾಧಿಕಾರಿಗಳಿಗೆ ನೀಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆ ಅನೇಕ ವರ್ಷಗಳಿಂದ ಬಗರ್ ಹುಕುಂ ಅಡಿಯಲ್ಲಿ ಸಾಗುವಳಿ ಮಾಡುತ್ತಿರುವ 4.5 ಎಕರೆ ಜಮೀನಿನಲ್ಲಿ ಶಾಲೆ, ಒಕ್ಕಲು ಕಣ, ಆಸ್ಪತ್ರೆ, ಅಂಗನವಾಡಿ, ಸ್ಮಶಾನ, ಟವರ್ ನಿರ್ಮಾಣ ಮಾಡಬೇಕೆಂದು ನಾವು ಅರ್ಜಿಯನ್ನು ನೀಡಿರುತ್ತೇವೆ ಎಂದರೆ ಸರಿ. ಸದರಿ 4.5 ಎಕರೆ ಜಮೀನು ನಮ್ಮ ಮನೆಯ ಪಕ್ಕದಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ನಮ್ಮ ಮನೆಯಿಂದ 15 ರಿಂದ 20 ಮೀಟರ್ ಅಂತರದಲ್ಲಿ 4.5 ಎಕರೆ ಜಮೀನು ಬರುತ್ತದೆ. ಅದರ ಅಕ್ಕಪಕ್ಕದಲ್ಲಿಯೂ ಸಹ ಮನೆಗಳಿರುತ್ತವೆ.

5. ಮನೆಗಳಿರುವ 10-15 ಅಡಿ ಅಂತರದಲ್ಲಿ ಸ್ಮಶಾನವನ್ನು ನಿರ್ಮಾಣ ಮಾಡುವುದಿಲ್ಲ. ಸ್ಮಶಾನದ ನಿರ್ಮಾಣವನ್ನು ಮಾಡಬೇಕೆಂದು ನಿರ್ಣಯ ನಮ್ಮ ಗ್ರಾಮ ಪಂಚಾಯಿತಿಯಲ್ಲಿ ಆಗಿರುವುದಿಲ್ಲ. ಪ್ರತಿವಾದಿ ಮತ್ತು ತುಮರಿ ಕೊಪ್ಪ ಗ್ರಾಮದ ಗ್ರಾಮಸ್ಥರು ನಾನು ಮತ್ತು ನನ್ನ ಕುಟುಂಬದವರು ಒತ್ತುವರಿ ಮಾಡುತ್ತಿರುವ ಜಾಗವನ್ನು ತೆರವುಗೊಳಿಸಲು ಪ್ರಯತ್ನಿಸಿದ ಕಾರಣ ಪ್ರತಿವಾದಿಯ 4.5 ಎಕರೆ ಜಮೀನನ್ನು ತಪ್ಪಿಸುವ ಉದ್ದೇಶದಿಂದ ಗ್ರಾಮ ಪಂಚಾಯಿತಿಯಲ್ಲಿ ಅಧಿಕಾರ ದುರುಪಯೋಗ ಮಾಡಿಕೊಂಡು ನಿರ್ಣಯವನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ತಹಶೀಲ್ದಾರ್ ರವರಿಗೆ ನೀಡಿದ ಅರ್ಜಿ ಇನ್ನೂ ಇತ್ಯರ್ಥ ವಾಗದ ಕಾರಣ ನಾನು ಮತ್ತು ನನ್ನ ಸಹೋದರರು ಸೇರಿ ಗ್ರಾಮಸ್ಥರ ಪರವಾಗಿ ಎಂದು ಸುಳ್ಳು ಹೇಳಿ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ